**ಅ.ದಾವಾ ನಂ. 213/2020** **ಪಿ.ಡಬ್ಲ್ಯೂ-1**

**ದಿನಾಂಕ 20/02/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಜೆ.ಯು.ಆರ್. ವಕೀಲರಿಂದ**

ಈ ದಾವೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನಾನು ಹೊಂದಿದ್ದೇನೆ. ನಾನು ಈ ದಾವೆಯನ್ನು 2 ಎಕರೆ 4 ಗುಂಟೆಗೆ ಸಲ್ಲಿಸಿದ್ದೇನೆ. 190/1 ರಲ್ಲಿ 19 ಗುಂಟೆ, 190/2 ಬಿ ರಲ್ಲಿ 21 ಗುಂಟೆ, 190/10 ರಲ್ಲಿ 27 ಗುಂಟೆ, 190/3 ಬಿ ರಲ್ಲಿ 17 ಗುಂಟೆ ಜಮೀನಿಗೆ ದಾವಾ ಸಲ್ಲಿಸಿದ್ದೇನೆ. ಸದರಿ ಎಲ್ಲಾ ಜಮೀನುಗಳ ಚೆಕ್ಕುಬಂದಿ ನಾನು ಹೇಳಬಲ್ಲೆ. 1972 ರಲ್ಲಿ ನನ್ನ ತಂದೆ ಚಂದ್ರಶೇಖರಯ್ಯ ರವರಿಂದ ಈ ಜಮೀನುಗಳನ್ನು ಖರೀದಿ ಮಾಡಿದ್ದರು. ಸದರಿ ಕ್ರಯಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನ್ನ ತಂದೆ ಇವತ್ತಿಗೂ ಜೀವಂತವಾಗಿದ್ದಾರೆ. ಈ ದಾವೆಯನ್ನು ನಾನು ಮತ್ತು ನನ್ನ ತಾಯಿ ಜಂಟಿಯಾಗಿ ಸಲ್ಲಿಸಿದ್ದೇವೆ. ನಿಮ್ಮ ತಂದೆ ಜೀವಂತ ಇದ್ದಾಗ ನಿಮಗೂ ಮತ್ತು ನಿಮ್ಮ ತಾಯಿಗೂ ಈ ದಾವೆ ಸಲ್ಲಿಸಲು ಹಕ್ಕು ಹೇಗೆ ಬಂತು ಎಂದು ಪ್ರಶ್ನಿಸಲು ಸಾಕ್ಷಿ ಹೇಳುತ್ತಾರೆ 1972 ರಲ್ಲಿ ಖರಿದಿ ಮಾಡಿದ್ದು ನನ್ನ ತಾಯಿ ನನ್ನ ತಂದೆಯಲ್ಲ ಎಂದು. 1972 ರ ಕ್ರಯಪತ್ರಕ್ಕೆ ನನ್ನ ತಂದೆ ಸಾಕ್ಷಿಯಾಗಿಯಾದರೂ ಸಹಿ ಹಾಕಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಕ್ರಯ ಕೊಟ್ಟಂತಹ ಚಂದ್ರಶೇಖರಯ್ಯ ಈಗ ಮೃತಪಟ್ಟಿದ್ದಾರೆ.. ನನ್ನ ತಾಯಿ 08.12.2020 ರಲ್ಲಿ ಈ ಸ್ವತ್ತುಗಳನ್ನು ನನಗೆ ದಾನವಾಗಿ ಬರೆದುಕೊಟ್ಟಿದ್ದಾರೆ. ಸದರಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ನಾನು ಈ ದಾವೆಯನ್ನು 26.12.2020 ರಲ್ಲಿ ಸಲ್ಲಿಸಿದ್ದೇನೆ ಎಂದರೆ ಸರಿ. ದಾವೆ ಸಲ್ಲಿಸಿದ ನಂತರ ದಾನಪತ್ರವನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿ ದಾನಪತ್ರವನ್ನು ನಮ್ಮ ವಕೀಲರಾದ ಆನಂದೇಶ್ವರ್ ರವರೇ ಬರದದ್ದು ಎಂದರೆ ಸರಿ.

2. ನನ್ನ ತಂದೆಗೆ ಮೂರು ಮಂದಿ ಮಕ್ಕಳಿದ್ದು ಎಲ್ಲರೂ ಬದುಕಿದ್ದಾರೆ. ಅವರು ಯಾರು ದಾನಪತ್ರಕ್ಕೆ ಸಾಕ್ಷಿಯಾಗಿ ಸಹಿ ಹಾಕಿಲ್ಲ ಎಂದರೆ ಸರಿ ದಾನಪತ್ರ ಬರೆದುಕೊಡುವ ಮುನ್ನಾ ಪಹಣಿಗಳೆಲ್ಲಾ ನಿಮ್ಮ ಹೆಸರಿನಲ್ಲಿದ್ದವು ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ನನ್ನ ತಾಯಿಯ

ಹೆಸರಿನಲ್ಲಿದ್ದವು ಸದರಿ ಪಹಣಿಗಳನ್ನು ನಾನು ಹಾಜರುಪಡಿಸಿದ್ದೇನೆ. ಸಾಕ್ಷಿಗೆ ನಿ.ಪಿ 3 ನ್ನು ತೋರಿಸಿ ಇದರಲ್ಲಿ ನಿಮ್ಮ ಹೆಸರಿದೆ ಎಂದು ಸೂಚಿಸಲು ಸಾಕ್ಷಿ ಹೌದು ಎಂದು ಒಪ್ಪುತ್ತಾರೆ. ಸಾಕ್ಷಿಗೆ ನಿ.ಪಿ 4 ನ್ನು ತೋರಿಸಿ ಇದರಲ್ಲಿ ನಿಮ್ಮ ಹೆಸರಿದೆ ಎಂದು ಸೂಚಿಸಲು ಸಾಕ್ಷಿ ಹೌದು ಎಂದು ಒಪ್ಪುತ್ತಾರೆ. ಸಾಕ್ಷಿಗೆ ನಿ.ಪಿ 5 ನ್ನು ತೋರಿಸಿ ಇದರಲ್ಲಿ ನಿಮ್ಮ ಹೆಸರಿದೆ ಎಂದು ಸೂಚಿಸಲು ಸಾಕ್ಷಿ ಹೌದು ಎಂದು ಒಪ್ಪುತ್ತಾರೆ. ನೀವು ನ್ಯಾಯಾಲಯಕ್ಕೆ ಸಲ್ಲಿಸಿರುವ ಯಾವುದೇ ಪಹಣಿಯಲ್ಲೂ ನಿಮ್ಮ ತಾಯಿಯ ಹೆಸರು ಇಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಅದು ಕಳೆದಿರಬಹುದು ಅಥವಾ ಅದು ಬೇಕಾದರೆ ಹಾಜರುಪಡಿಸಬಲ್ಲೆ. ದಾವೆ ಸಲ್ಲಿಸುವ ಕಾಲಕ್ಕೆ ದಾವಾ ಸ್ವತ್ತುಗಳ ಹಕ್ಕುದಾರರು, ಸ್ವಾಧೀನದಾರರು ನಾನು ಆಗಿರಲಿಲ್ಲ ಎಂದರೆ ಸರಿಯಲ್ಲ.

3. ತಾಲ್ಲೂಕು ಕಛೇರಿಯಿಂದ ದಾವಾ ಸ್ವತ್ತುಗಳ ಚೆಕ್ಕುಬಂದಿ ದೃಢೀಕರಣ ಪತ್ರವನ್ನು ಪಡೆದಿದ್ದೀರೆ ಎಂದು ಪ್ರಶ್ನಿಸಲು ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಮ್ಮ ದಾನಪತ್ರದಲ್ಲಿ ನಮೂದಾಗಿರುವ ಚೆಕ್ಕುಬಂದಿಗೆ ಪೂರಕವಾಗಿ ಯಾವುದೇ ದಾಖಲೆಗಳು ನಿಮ್ಮಲ್ಲಿ ಇಲ್ಲ ಎಂದು ಸೂಚಿಸಲು ಸಾಕ್ಷಿ ಹಾಜರುಪಡಿಸಬಲ್ಲೆ ಎಂದು ಹೇಳುತ್ತಾರೆ. ದಾವಾ ಸ್ವತ್ತುಗಳಲ್ಲಿ 1997 ನೇ ಇಸವಿಯಲ್ಲಿ ನನ್ನ ತಾಯಿ ಬೋರನ್ನು ತೆಗೆಸಿದ್ದರು. ಬೋರ್ ತೆಗೆಸಿದ ಬಗ್ಗೆ ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಹಾಜರುಪಡಿಸಬಲ್ಲೆ ಎಂದು.

4. ದಾವಾ ಸ್ವತ್ತುಗಳ ಬಗ್ಗೆ ನಾನು ಯಾವುದೇ ನಕ್ಷೆಯನ್ನು ಹಾಜರುಪಡಿಸಿಲ್ಲ. ಪ್ರತಿವಾದಿಯ ಜಮೀನು ನಮ್ಮ ಜಮೀನಿನ ದಕ್ಷಿಣಕ್ಕಿದೆ ಎಂದರೆ ಸರಿ. ನಮ್ಮ ಹಾಗೂ ಪ್ರತಿವಾದಿಯ ಆಸ್ತಿಯ ಮಧ್ಯ ಪಿ.ಡಬ್ಲ್ಯೂ.ಡಿ ರಸ್ತೆಯೊಂದಿದೆ ಎಂದರೆ ಸರಿ. ರಸ್ತೆ ಇರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ನನ್ನ ಬಳಿ ಇದೆ ಹಾಜರುಪಡಿಸಬಲ್ಲೆ ಎಂದು.

5. ಅ.ದಾವಾ 41/2006 ನ್ನು ನನ್ನ ತಾಯಿ ಆನಂದ ರವರ ವಿರುದ್ಧ ಸಲ್ಲಿಸಿದ್ದರು. ಸದರಿ ದಾವೆಯಲ್ಲಿ ಈ ಪ್ರಕರಣದ ಪ್ರತಿವಾದಿ ಪಕ್ಷಗಾರರಲ್ಲ ಎಂದರೆ ಸರಿ. ನಿ.ಪಿ 6 ರ ಪ್ರಕಾರ ಪ್ರತಿವಾದಿಗೆ ಯಾವುದೇ ತಿಳುವಳಿಕೆ ಪತ್ರ ಅಳತೆ ಮಾಡುವ ಕಾಲದಲ್ಲಿ ಕೊಟ್ಟಿರಲಿಲ್ಲ ಎಂದರೆ ಸರಿ. ಪ್ರತಿವಾದಿ

ನಿವೃತ್ತ ಶಿಕ್ಷಕರಾಗಿದ್ದು ಆತನ ಹೆಂಡತಿಯೂ ಶಿಕ್ಷಕರಾಗಿದ್ದರು ಎಂದರೆ ಸರಿ. ಪ್ರತಿವಾದಿಯ ಇಬ್ಬರೂ ಮಕ್ಕಳು ವೈದ್ಯರಾಗಿದ್ದಾರೆ ಎಂದರೆ ಸರಿ. ನಾನು ಪ್ರತಿವಾದಿಯ ಮೇಲೆ ಹಲ್ಲೆ ಮಾಡಿದ್ದೇನೆಂದು ಹಳ್ಳಿಮೈಸೂರು ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣವೊಂದು ಸಿಸಿ 103/2020 ರಂತೆ ದಾಖಲಾಗಿದೆ ಎಂದರೆ ಸರಿ. ಅದು ವಿಚಾರಣೆಗೆ ಅಪರ ನ್ಯಾಯಾಲಯದಲ್ಲಿ ಬಾಕಿ ಇದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನ ವಿರುದ್ದ ಕಲಂ 326 ಭಾ.ದಂ.ಸಂಹಿತೆಯಂತೆ ಆರೋಪ ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನಾನು ತೀವ್ರ ಸ್ವರೂಪದ ಗಾಯಗಳಾಗುವಂತೆ ಪ್ರತಿವಾದಿಯ ಮೇಲೆ ಹಲ್ಲೆ ಮಾಡಲಾಗಿದೆ ಎಂದು ಆರೋಪ ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಪ್ರತಿವಾದಿಯ ವಿಚಾರಣೆ ಮುಕ್ತಾಯವಾಗಿದೆ ಎಂದರೆ ಸರಿ. ನನ್ನ ವಿರುದ್ಧ ಸಿಸಿ 457/2016 ರಂತೆ ಮತ್ತೊಂದು ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು ಎಂದರೆ ಸರಿಯಲ್ಲ ಸದರಿ ಪ್ರಕರಣದಲ್ಲಿ ನಾನು ರಾಜೀ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸಲ್ಲಿಸುವ ಕಾಲಕ್ಕೆ ದಾವಾ ಸ್ವತ್ತುಗಳ ಮೇಲೆ ನನಗೆ ಯಾವುದೇ ಹಕ್ಕು ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. ನಾನೇ ಪ್ರತಿವಾದಿಯ ಸ್ವಾಧೀನಕ್ಕೆ ತೊಂದರೆಯುಂಟು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಇದೇ ವಿಚಾರವಾಗಿ ನಾನು ಅವರ ಮೇಲೆ ಹಲ್ಲೆ ಮಾಡಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ ನನಗೆ ಅನುಕೂಲವಾಗುವಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.